**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ:** 17/2022 **CW**-5 **PW**-4

**ಸಾಕ್ಷಿಯನ್ನು ದಿಃ 05.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಹೆಸರುಃ ಅಭಿಲಾಶ್

ತಂದೆಯ ಹೆಸರುಃ ಕೃಷ್ಣಯ್ಯ

ವಯಸ್ಸುಃ 40

ವೃತ್ತಿಃ ಅಬಕಾರಿ ಮುಖ್ಯ ಪೇದೆ

ವಾಸ ಸ್ಥಳಃ ಚನ್ನರಾಯಪಟ್ಟಣ

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2019 ರಿಂದ ಇಲ್ಲಿಯವರೆಗೂ ಚನ್ನರಾಯಪಟ್ಟಣದ ಅಬಕಾರಿ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 09.06.2021 ರಂದು ಮಧ್ಯಾಹ್ನ 3.00 ಗಂಟೆಯಲ್ಲಿ ಚನ್ನರಾಯಪಟ್ಟಣದ ಕುರುವಂಕ ಗ್ರಾಮದ ದ್ವಾರದಲ್ಲಿ ಕೋವಿಡ್ ಸಂಬಂಧ ನಾನು, ಚಾಸಾ-1, ಚಾಸಾ-4 ರವರು ಗಸ್ತು ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು ಕುರುವಂಕ ಗ್ರಾಮದ ವಿಷಕಂಠೇಗೌಡ ಬಿನ್ ನಂಜುಂಡೇಗೌಡ ಎಂಬುವವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ಮದ್ಯವನ್ನು ಸಂಗ್ರಹಿಸಿಟ್ಟಿರುತ್ತಾರೆ ಎಂದು ಮಾಹಿತಿ ನೀಡಿದ್ದು, ಚಾಸಾ-1 ರವರು ಆ ವ್ಯಕ್ತಿಯನ್ನು ಪಂಚನಾಗಿ ಸಹಕರಿಸುವಂತೆ ಕೇಳಿದಾಗ, ಆತ ನಿರಾಕರಿಸಿರುತ್ತಾನೆ. ನಂತರ ಕುರುವಂಕ ಗ್ರಾಮದ ಸರ್ಕಲ್ ಬಳಿ ಬಂದು ಅಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳಿಗೆ ನಮ್ಮ ಪರಿಚಯ ಮಾಡಿ, ವಿಚಾರಗಳನ್ನು ತಿಳಿಸಿ, ಪಂಚರಾಗಿ ಬರುವಂತೆ ತಿಳಿಸಿ ನೋಟೀಸನ್ನು ನೀಡಲಾಗಿ, ಅವರು ಅದಕ್ಕೆ ಒಪ್ಪಿ, ಅವರ ಸಹಾಯದಿಂದಲೇ ನಾವು ಮಾಹಿತಿ

ಬಂದ ವ್ಯಕ್ತಿಯ ಮನೆಯ ಬಳಿ ಹೋಗುತ್ತಿರುವಾಗಲೇ ಅಲ್ಲಿದ್ದ ಒಬ್ಬ ವ್ಯಕ್ತಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ, ಓಡಲು ಪ್ರಾರಂಭಿಸಿದ್ದು, ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಲಾಗಿ, ಆತ ಸಿಕ್ಕಿರುವುದಿಲ್ಲ. ಸದರಿ ಅಂಗಡಿಯನ್ನು ಶೋಧನೆ ಮಾಡಲು ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ಸಾಕಷ್ಟು ಸಮಯಾವಕಾಶ ಇಲ್ಲದೇ ಇರುವ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ಆದಾರವನ್ನು ಚಾಸಾ-1 ರವರು ತಯಾರಿಸಿಕೊಂಡು, ಅದಕ್ಕೆ ಪಂಚರ ಸಹಿಯನ್ನು ಸಹಿ ಪಡೆದುಕೊಳ್ಳಲಾಯಿತು. ನಂತರ ನಾವು ಪರಸ್ಪರ ಅಂಗಶೋಧನೆ ಮಾಡಿಕೊಂಡು, ಸದರಿ ಅಂಗಡಿಯ ಒಳಗೆ ಹೋಗಿ ನೋಡಲಾಗಿ, ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇದ್ದು, ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ತುಂಬಿರುವುದು ಕಂಡುಬಂದಿದ್ದು, ಅವುಗಳನ್ನು ತೆಗೆದು ನೋಡಲಾಗಿ, ಅದರಲ್ಲಿ ಸುಮಾರು 90 ಎಂ.ಎಲ್ ನ ಎಂ.ಸಿ.ನಂ.1 ತ್ರಿಬಲ್ ಎಕ್ಸ್ ರಂ ಎಂಬ ಹೆಸರಿಗೆ 56 ಟೆಟ್ರಾ ಪ್ಯಾಕೆಟ್ ಗಳು ಇರುವುದು ಕಂಡುಬಂದಿರುತ್ತದೆ. ಅವುಗಳ ಪರವಾನಿಗೆ ಬಗ್ಗೆ ಹುಡುಕಲಾಗಿ, ಅವುಗಳ ಬಗ್ಗೆ ಯಾವುದೇ ಪರವಾನಿಗೆ ಇರುವುದಿಲ್ಲ. ಈಗಾಗಿ ಚಾಸಾ-1 ರವರು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ಅವುಗಳನ್ನು ಪರೀಕ್ಷಿಸಿದಾಗ ಅಬಕಾರಿ ಭದ್ರತಾ ಚೀಟಿ ಹರಿದ ಸ್ಥಿತಿಯಲ್ಲಿದ್ದು ಸ್ಪಷ್ಟತೆ ಇರಲಿಲ್ಲ. ಸದರಿ ಮದ್ಯದ ಪ್ಯಾಕೆಟ್ ಗಳನ್ನು ಒಂದು ಬಿಳಿಯ ಬಟ್ಟೆಯ ಬ್ಯಾಗಿನಲ್ಲಿ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಇಲಾಖಾ ಸೀಲನ್ನು ಮಾಡಲಾಯಿತು. ನಂತರ ಸ್ಥಳದಲ್ಲಿ ಮಾದರಿ ಸೀಲು ಮತ್ತು ಮಾದರಿ ಚೀಟಿಯನ್ನು ತಯಾರಿಸಿ, ಮಾದರಿ ಚೀಟಿಯನ್ನು ಸದರಿ ಚೀಲಕ್ಕೆ ಅಂಟಿಸಲಾಯಿತು. ಸ್ಥಳದಲ್ಲಿಯೇ ಚಾಸಾ-1 ರವರು ಮಹಜರ್ ಕ್ರಮವನ್ನು ಮದ್ಯಾಹ್ನ 3.45 ರಿಂದ 4.50 ರವರೆಗೆ ತಯಾರಿಸಿರುತ್ತಾರೆ.

ಸಾಕ್ಷಿ ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ನಂತರ ಮುದ್ದೆ ಮಾಲುಗಳ ಜೊತೆ ಠಾಣೆಗೆ ಹಾಜರಾಗಿ ಆರೋಪಿಯ ವಿರುದ್ಧ ಪ್ರ.ವ ವರದಿಯನ್ನು ತಯಾರಿಸಿರುತ್ತಾರೆ,

ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ (ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

ದಿಃ 16.06.2021 ರಂದು ಸದರಿ ಮೊ. ಸಂಬಂಧಿಸಿದಂತೆ ಮು ಮಾ ವನ್ನು ಕಛೇರಿಯ ಆದೇಶ ಪತ್ರದೊಂದಿಗೆ ಬೆಂಗಳೂರಿನ ಕೇಂದ್ರ ರಾಸಾಯನಿಕ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿರುತ್ತೇನೆ.

ಸಾಕ್ಷಿ ದಿಃ 16.06.2021 ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮು ಮಾ -1 ನ್ನು ನೋಡಿ ಗುರುತಿಸಿರುತ್ತಾರೆ.

ದಿಃ 03.08.2021 ರಲ್ಲಿ ರಾಸಾಯನಿಕ ಪರೀಕ್ಷೆಯ ವರದಿಯನ್ನು ಚಾಸಾ-6 ರವರಿಗೆ ತಂದು ನೀಡಿರುತ್ತೇನೆ. ಈ ಸಂಬಂಧ ನಾನು ತನಿಖಾಧಿಕಾರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಆರ್.ಜಿ ವಕೀಲರಿಂದಃ**

ಆ ದಿನ ಈ ದಾಳಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಳಿಯನ್ನು ಮಾಡಿಲ್ಲ. ವರದಿ ತಯಾರಾದ ನಂತರ ಪ್ರಯೋಗಾಲಯದಿಂದ ನಮಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ. ಆ ದಿನ ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ದಾಳಿ

ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಚಾಸಾ-1 ರವರು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಮತ್ತು ನಮ್ಮಿಂದ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಸಮಕ್ಷಮ ಮು ಮಾ -1 ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೆಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**